MYSORE LEGISLATIVE ASSEMBLY

Thursday, 21st July 1966.

The House met in the Assembly Chamber, Vidhana Soudha, Bangalore, at One of the Clock.

MR. DEPUTY SPEAKER (SRI A. R. PANCHAGAVI, B.A., LL.B.) in the Chair.

STARRED QUESTIONS

(to which oral answers were given)

Construction of a new Tank near Haralalli.

*Q.—614. Sri N. NANJE GOWDA (Krishnarajpet).—

Will the Minister for Public Works be pleased to state :—

(*a*) whether an estimate has been prepared for the construction of a new tank near Haralalli village in Shilanere Hobli, Krishnarajapet Taluk ;

(*b*) the estimated cost of the same ;

(*c*) the extent of land that would be irrigated by the same ;

(*d*) whether it is not a fact that Government had assured to include the same in the budget of 1964-65 ;

(*e*) the difficulty in not sanctioning the same so far ;

(*f*) whether they would sanction the same at least during the current year ?

*A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) Rs. 6.54 lakhs.

(*c*) 835 acres.

(*d*) No such assurance was held out.

(*e*) Paucity of funds.

(*f*) The proposal will be considered if adequate reasources are available for Minor Irrigation.

ಶ್ರೀ ಎನ್. ನಂಜೇಗೌಡ.—1964–65 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಈ ಹೊಸ ಕೆರೆ ನಿರ್ಮಿಸುವುದನ್ನು ಸೇರಿಸುವುದಾಗಿ ಸರಕಾರದವರು ಭರವಸೆ ಕೊಟ್ಟಿದ್ದುದು ನಿಜವಲ್ಲವೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಅಂಥ ಭರವಸೆಯನ್ನೇನೂ ಕೊಟ್ಟಿರಲಿಲ್ಲ ಎಂದು ಉತ್ತರ ಹೇಳಿದ್ದೀರಿ. ಆದರೆ ಈ ವರ್ಷದ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸಿ ಈ ಕೆಲಸ ಮಾಡಬೇಕೆಂದು ಸರಕಾರದ ಆದೇಶ ಬಂದಿದೆಯಲ್ಲವೇ ?

†ಶ್ರೀ ಆಲೂರು ಹನುಮಂತಪ್ಪ.—ಅಂಥ ಭರವಸೆಯನ್ನೇನೂ ಕೊಟ್ಟಿರಲಿಲ್ಲ. ಆದರೆ ಮಾನ್ಯ ಸದಸ್ಯರು ಸರಕಾರಕ್ಕೆ ಕಾಗದ ಬರೆಯುತ್ತಾ ಇದ್ದಾರೆ. ಇದೊಂದು ಮುಖ್ಯ ಕೆಲಸವಾಗಿದೆ; ಆದುದರಿಂದ ಇದರ ಬಗ್ಗೆ ಸರಕಾರ ವ್ಯವಸ್ಥೆ ಮಾಡುತ್ತದೆ.

ಶ್ರೀ ಜಿ. ರಾಮೇಗೌಡ.—6.54 ಲಕ್ಷ ರೂಪಾಯಿ ಖರ್ಚಿನಲ್ಲಿ 835 ಎಕರೆ ನೀರಾವರಿಯಾಗ ತಕ್ಕಂಥ ಕೆಲಸಕ್ಕೆ ಹಣ ಇಲ್ಲ ಎಂದು ಹೇಳುವುದು ಇದು ಯಾವ ನೀತಿ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಈ ತಾಲ್ಲೂಕಿನಲ್ಲಿ 33 ಲಕ್ಷ ರೂಪಾಯಿ ಕಾಮಗಾರಿ ಮಾಡ ಬೇಕಾಗಿದೆ. ಈಗಾಗಲೇ 21 ಲಕ್ಷ ರೂಪಾಯಿವರೆಗೆ ಕೆಲಸ ಕಾರ್ಯಗಳಿಗೆ ಹಣ ಖರ್ಚಾಗಿದೆ. ಇನ್ನೂ ಹನ್ನೊಂದು ಚಿಲ್ಲರೆ ಲಕ್ಷ ಹಣ ಖರ್ಚು ಮಾಡಬೇಕಾಗಿದೆ. ಆದರೆ Spilloyer works ಜಾಸ್ತಿದ್ದಾರಿ ಬಹಳ ಇರುವುದರಿಂದ ಕೆಲಸ ನ್ಯಲ್ಪ ನಿಧಾನವಾಗಿದೆ. ಈ ಕೆಲಸ ತೆಗೆದುಕೊಳ್ಳ ಬೇಕೆಂದು ಮಾನ್ಯ ಸದಸ್ಯರು ಸರಕಾರಕ್ಕೆ ಕಾಗದ ಬರೆದಿದ್ದಾರೆ. ಈ ಕೆಲಸ ತೆಗೆದುಕೊಳ್ಳುತ್ತೇವೆ. ಸದ್ಯಕ್ಕೆ ಸ್ಪಿಲ್ ಓವರ್ ವರ್ಕ್ಸ್ ಜಾಸ್ತಿ ಇರುವುದರಿಂದ ಈ ಕೆಲಸಕ್ಕಾಗಿ ಹಣ ಒದಗಿಸಲು ಆಲೋಚನೆ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—38 ಕೋಟಿ ರೂಪಾಯಿಗಳ ಮಾಸ್ಟರ್ ಪ್ಲಾನ್‌ನಲ್ಲಿ ಈ 6.54 ಲಕ್ಷ ರೂಪಾಯಿ ಸೇರಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮಾಸ್ಟರ್ ಪ್ಲಾನ್‌ನಲ್ಲಿ ಈ ಕೆರೆಯ ಅಂದಾಜು ಸೇರಿವೆ.

Sri G. V. GOWDA.—Is it 30 crores or less ? Is there any phased programme to spend that amount ?

Sri ALUR HANUMANTHAPPA.—It is not thirty crores. We have investigated projects and they are under various stages of scrutiny. Nearly 80 crores worth of estimates we have prepared. 16,000 works are under investigation in various stages of of scrutiny, plan and estimate.

ಶ್ರೀ ಎಚ್. ಡಿ. ದೇವೇಗೌಡ.—ಹೊಸ ಕೆರೆ ನಿರ್ಮಾಣ ಮಾಡುವ ಕಾರ್ಯಕ್ಕೆ ಪ್ರಾಶಸ್ತ್ಯ ಕೊಡಬೇಕೆಂಬುದು ಸರಕಾರದ ಗಮನದಲ್ಲಿ ಇದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇದೆ; ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈನರ್ ಇರಿಗೇಶನ್ ಕೆಲಸ ಕಾರ್ಯಗಳನ್ನು ಕಾರ್ಯಗತ ಮಾಡುವುದಕ್ಕೆ ಸರ್ವ ಸಾಮರ್ಥ್ಯ ಸರಕಾರಕ್ಕೆ ಇದೆ ಎಂದು ಹೇಳಿದ್ದಾರೆ. ಹಾಗಾದರೆ ಈ ಕೆಲಸ ಕ್ಕಾಗಿ ಸರಕಾರಕ್ಕೆ ಬರಬೇಕಾದ 38 ಕೋಟಿ ರೂಪಾಯಿಗಳು ಬಂದಿದೆಯೇ ? ಅಥವಾ ಈ ಯೋಜನೆ ಅಲ್ಲಿಯೇ ನಿಂತು ಹೋಯಿತೇ ?

ಶ್ರೀ ಆಲೂರು ಹನುಮಂತಪ್ಪ.—38 ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿಲ್ಲ. ಮೂರನೇ ಯೋಜನೆಯಲ್ಲಿ ಎಂಟೂವರೆ ಕೋಟಿ ರೂಪಾಯಿ ಜೊತೆಗೆ 16 ಕೋಟಿ ರೂಪಾಯಿ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ನಾಲ್ಕನೇ ಯೋಜನೆಯಲ್ಲಿ ಅಂದರೆ ಈ ವರ್ಷ 2 ಕೋಟಿ 90 ಲಕ್ಷ ರೂಪಾಯಿ ಇದಕ್ಕಾಗಿ ಒದಗಿಸಬೇಕೆಂದಿದ್ದೇವೆ.

———

†Indicates that the remarks or speeches have not been revised by the member concerned